ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಘಟಕ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಅನೆಕ್ಸ್ ಬಿಲ್ಡಿಂಗ್-3, ಎನ್.ಆರ್.ವೃತ್ತ, ಬೆಂಗಳೂರು-560002

---

ಸಂಖ್ಯೆ: ಉಅಸಂ/ಪಿಆರ್/678 /2021-22 ದಿನಾಂಕ: 21-2-2022

## <u>ಕಛೇರಿ ಅಧಿಕೃತ ಜ್ಞಾಪನ ಪತ್ರ</u>

ವಿಷಯ: ಪಶ್ಚಿಮ ವಲಯ ವ್ಯಾಪ್ತಿಯ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ಚೌಡಯ್ಯ ರಸ್ತೆ, ಸರ್ಕಲ್ ಮಾರಮ್ಮ ದೇವಸ್ಥಾನದಿಂದ ಕರ್ನಾಟಕ ಮೆಡಿಕಲ್ ಪ್ಲಾಂಟ್ ಪ್ರಾಧಿಕಾರದವರೆಗೆ (CET) ಪಾದಚಾರಿ ಮಾರ್ಗ ರಸ್ತೆ ನಿರ್ಮಾಣ ಯೋಜನೆ ಕಾಮಗಾರಿಗೆ ಅಡ್ಡಬರುವ ಮರಗಳ ತೆರವು ಪತ್ರದ ಬಗ್ಗೆ.

ಉಲ್ಲೇಖ: 1. ಅರ್ಜಿ ಸಂಖ್ಯೆ: ಕಾ.ಪಾ.ಅ.ರ.ಮೂ.ಸೌ-ಪ.ವಿ/ಪಿಆರ್/135/2021-22. ದಿನಾಂಕ: 14-09-2021.
2. ಅರ್ಜಿ ಸಂಖ್ಯೆ: ಕಾ.ಪಾ.ಅ.ರ.ಮೂ.ಸೌ-ಪ.ವಿ/ಪಿಆರ್/235/2021-22. ದಿನಾಂಕ: 02-12-2021.
3. ವಲಯ ಅರಣ್ಯಾಧಿಕಾರಿ ರವರ ವರದಿ ದಿನಾಂಕ: 22-12-2021
4. ವೃಕ್ಷ ತಜ್ಞರ ಸಮಿತಿಯ ಸಭೆಯ ನಡಾವಳಿ ದಿನಾಂಕ: 18-02-2022.

****

ಪ್ರಸ್ತಾವನೆ:-

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ, ಪಶ್ಚಿಮ ವಲಯ ಇವರು ಉಲ್ಲೇಖದಡಿಯಲ್ಲಿನ ಪತ್ರದಲ್ಲಿ ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ, ಚೌಡಯ್ಯ ರಸ್ತೆ, ಸರ್ಕಲ್ ಮಾರಮ್ಮ ದೇವಸ್ಥಾನದಿಂದ ಕರ್ನಾಟಕ ಮೆಡಿಕಲ್ ಪ್ಲಾಂಟ್ ಪ್ರಾಧಿಕಾರದವರೆಗೆ (CET) ಪಾದಚಾರಿ ಅಗಲೀಕರಣ ಯೋಜನೆ ಕಾಮಗಾರಿಗೆ ಅಡ್ಡಬರುವ ಮರಗಳ ತೆರವಿಗೆ ಉಲ್ಲೇಖ (1) ಮತ್ತು (2) ರಲ್ಲಿ ಅರ್ಜಿ ಸಲ್ಲಿಸಿ ಅನುಮತಿ ಕೋರಿರುತ್ತಾರೆ. ಉಲ್ಲೇಖ (3) ರಂತೆ ವಲಯ ಅರಣ್ಯಾಧಿಕಾರಿ ರವರು ಸ್ಥಳ ಪರಿಶೀಲನೆ ಮಾಡಿ ಮರಗಳ ಎಣಿಕೆ ಪಟ್ಟಿಯನ್ನು ತಯಾರಿಸಿ, ವೃಕ್ಷ ತಜ್ಞರ ಸಮಿತಿಯ ಸಭೆಯಲ್ಲಿ ಮಂಡಿಸಿದ ನಂತರ, ಸಮಿತಿ ಸದಸ್ಯರುಗಳು ಎಣಿಕೆ ಪಟ್ಟಿಯಂತೆ ಸ್ಥಳ ಪರಿಶೀಲಿಸಿ ಉಲ್ಲೇಖ (3) ರಂತೆ (ದಿನಾಂಕ: 18-02-2022) ಸಮಿತಿಯ ಸಭೆಯಲ್ಲಿ ಚರ್ಚಿಸಿ ನೀಡಿದ ಸಭೆಯ ನಡಾವಳಿಯಂತೆ ಆದೇಶ ನೀಡಲಾಗಿದೆ.

## <u>ಆದೇಶ</u>

ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗು ವೃಕ್ಷಾಧಿಕಾರಿಯಾದ ನಾನು ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ, 1976 ರ ಕಲಂ (8) 3 ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಮೇಲೆ ವಿವರಿಸಿರುವ ಕಾರಣಗಳಂತೆ ಪಶ್ಚಿಮ ವಲಯ ವ್ಯಾಪ್ತಿಯ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ಚೌಡಯ್ಯ ರಸ್ತೆ, ಸರ್ಕಲ್ ಮಾರಮ್ಮ ದೇವಸ್ಥಾನದಿಂದ ಕರ್ನಾಟಕ ಮೆಡಿಕಲ್ ಪ್ಲಾಂಟ್ ಪ್ರಾಧಿಕಾರದವರೆಗೆ (CET) ಪಾದಚಾರಿ ಮಾರ್ಗ ರಸ್ತೆ ನಿರ್ಮಾಣ ಯೋಜನೆ ಕಾಮಗಾರಿಗೆ ಅಡ್ಡಬರುವ 24 ಮರಗಳ ಪೈಕಿ 08 ಮರಗಳ ಕತ್ತಾವಣೆ ಹಾಗೂ 16 ಮರಗಳನ್ನು ಸ್ಥಳದಲ್ಲಿಯೇ ಉಳಿಸಲು ವೃಕ್ಷ ತಜ್ಞರ ಸಮಿತಿಯ ನಡಾವಳಿಯಂತೆ ಮರಗಳ ಸಂಖ್ಯೆ, ಜಾತಿ ಇತ್ಯಾದಿ ವಿವರ ಮತ್ತು ಷರತ್ತುಗಳೊಂದಿಗೆ, ಕತ್ತಾವಣೆ ಆದೇಶ ನೀಡಲಾಗಿದೆ. ವಿವರಗಳನ್ನು ಅನುಬಂಧ-1 ಮತ್ತು ಅನುಬಂಧ-2 ರಲ್ಲಿ ನೀಡಲಾಗಿದೆ.

ಸದರಿ ಆದೇಶವು ಬಿಬಿಎಂಪಿ ಅಧಿಕೃತ ಜಾಲತಾಣ <u>**https://site.bbmp.gov.in**</u> ರಲ್ಲಿ ಪ್ರಕಟಣೆಗೊಂಡ 10 ದಿವಸಗಳ ನಂತರ ಚಾಲನೆಗೆ ಬರುತ್ತದೆ.

-2-

ಘೋಷ್ವಾರೆ.

ಒಟ್ಟು ಮರಗಳು - 24 ಮರಗಳು.

1. ಸ್ಥಳದಲ್ಲಿಯೇ ಉಳಿಸುವುದು - 16 ಮರಗಳು. (ಮರಗಳ ಸಂಖ್ಯೆ: 1, 10, 11, 12, 13, 14, 15, 16, 17, 18, 19, 20, 21, 22, 23 & 24) ಅನುಬಂಧ-1)
2. ತೆರವುಗೊಳಿಸಬೇಕಾದ - 08 ಮರಗಳು (ಗುಲ್‌ಮೊಹರ್ ಮರಗಳ ಸಂಖ್ಯೆ: 2, 3, 4 & 6) (ಮಹಾಗನಿ ಮರಗಳ ಸಂಖ್ಯೆ: 5, 7, 8 & 9) (ಅನುಬಂಧ-2)

ಷರತ್ತುಗಳು:-

1. ಮರಗಳ ತೆರವು ಕಾರ್ಯವನ್ನು ಅರಣ್ಯ ಸಿಬ್ಬಂದಿಗಳ ಸೂಕ್ತ ತಾಂತ್ರಿಕ ಮೇಲ್ವಿಚಾರಣೆಯಲ್ಲಿ ಅವರ ಸಲಹೆ ಸೂಚನೆಯಂತರ ಕೈಗೊಳ್ಳತಕ್ಕದ್ದು.
2. ಮರನಾಟಿ ಕಾರ್ಯವನ್ನು ಕೈಗೊಳ್ಳುವ ವ್ಯಕ್ತಿ/ ಸಂಸ್ಥೆಯು ಮರುನಾಟಿ ಮಾಡಲು ಅರ್ಹತೆ ಹೊಂದಿರತಕ್ಕದ್ದು ಹಾಗೂ ಅವರುಗಳ ಹೆಸರು ವಿಳಾಸ ಮತ್ತು ಮರುನಾಟಿ ಮಾಡದ ಮರದ ಸಂಸ್ಥೆಯೊಂದಿಗೆ ಮರದ ಛಾಯಾಚಿತ್ರದೊಂದಿಗೆ ಇತ್ಯಾದಿಗಳನ್ನು ದಾಖಲೆ ರೂಪದಲ್ಲಿ ಸಂಗ್ರಹಿಸಿಡಬೇಕು.
3. ಆದೇಶದಲ್ಲಿ ತಿಳಿಸಿರುವಂತೆ ಕತ್ರಾವಣೆ ಮಾಡುವ ಪ್ರತಿ ಮರಗಳ ಬದಲಿಗೆ ನೆಡುತ್ತಿರುವ (4) ಸಸಿಗಳ ವಿವರಗಳನ್ನು ಛಾಯಾಚಿತ್ರದೊಂದಿಗಡ ಕಛೇರಿಗೆ ಸಲ್ಲಿಸುವುದು.
4. ತೆರವುಗೊಳಿಸಲಾದ ಪ್ರತಿ ಮರದ ಬದಲಿಗೆ ಎತ್ತರದ ಹಾಗೂ ಉತ್ತಮ ಜಾತಿಯ ಕನಿಷ್ಠ 32 ಸಸಿಗಳನ್ನು ಸೂಕ್ತ ಸ್ಥಳದಲ್ಲಿ ನೆಟ್ಟು 3 ವರ್ಷಗಳವರೆಗೆ ನಿರ್ವಹಿಸಬೇಕು.
5. ಬೇರೆ ಮರಗಳಿಗೆ ಯಾವುದೇ ಹಾನಿಯಾಗದಂತೆ ಕಾಮಗಾರಿಯನ್ನು ನಿರ್ವಹಿಸುವುದು.

21/12

ವೃಕ್ಷಾಧಿಕಾರಿಗಳು ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.

ಪ್ರತಿಯನ್ನು:

1. ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ, ಪಶ್ಚಿಮ ವಲಯ ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
2. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿಬಿಎಂಪಿ ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ಉಪ ವಲಯ ಅರಣ್ಯಾಧಿಕಾರಿ /ವಲಯ ಅರಣ್ಯಾಧಿಕಾರಿ, ಪಶ್ಚಿಮ ವಲಯ, ರವರಿಗೆ ಮಾಹಿತಿಗಾಗಿ ಹಾಗೂ ನಿಯಮಾನುಸಾರ ಮರಗಳ ವಿಲೇವಾರಿ ಕ್ರಮಕ್ಕಾಗಿ ಸಲ್ಲಿಸಿದೆ.
4. ಕಛೇರಿ ಕಡತಕ್ಕೆ.

# ಅನುಬಂಧ-1

ಪಶ್ಚಿಮ ವಲಯ ವ್ಯಾಪ್ತಿಯ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ಚೌಡಯ್ಯ ರಸ್ತೆ, ಸರ್ಕಲ್ ಮಾರಮ್ಮ ದೇವಸ್ಥಾನದಿಂದ ಕರ್ನಾಟಕ ಮೆಡಿಕಲ್ ಪ್ಲಾಂಟ್ ಪ್ರಾಧಿಕಾರದವರೆಗೆ (CET) ಪಾದಚಾರಿ ಮಾರ್ಗ ರಸ್ತೆ ನಿರ್ಮಾಣ ಯೋಜನೆ ಕಾಮಗಾರಿಗೆ ಅಡ್ಡಬರುವ 24 ಮರಗಳ ಪೈಕಿ ಸ್ಥಳದಲ್ಲಿಯೇ ಉಳಿಸಬೇಕಾದ 16 ಮರಗಳ ವಿವರ.

| ಕ್ರಮ.ಸಂ | ಸ್ಥಳದಲ್ಲಿಯೇ ಉಳಿಸಬೇಕಾದ ಮರಗಳ ವಿವರ | | | |
|---|---|---|---|---|
| | ಮರಗಳ ಸಂಖ್ಯೆ | ಮರದ ಹೆಸರು | ಸುತ್ತಳತೆ (ಮೀ) | ಎತ್ತರ (ಮೀ) |
| 1 | 1 | ಮಳೆಮರ | 2.70 | 1.50 |
| 2 | 10 | ಪೆಲ್ಟೋಫಾರಂ | 3.05 | 2.00 |
| 3 | 11 | ಸಂಪಿಗೆ | 0.60 | 2.50 |
| 4 | 12 | ಹೊಂಗೆ | 0.93 | 2.50 |
| 5 | 13 | ನಾಯಿನೇರಳೆ | 1.23 | 2.50 |
| 6 | 14 | ಮಹಾಗನಿ | 0.73 | 2.50 |
| 7 | 15 | ಗುಲ್‌ಮೊಹರ್ | 1.75 | 4.50 |
| 8 | 16 | ಗುಲ್‌ಮೊಹರ್ | 1.60 | 3.50 |
| 9 | 17 | ಪೆಲ್ಟೋಫಾರಂ | 2.27 | 5.50 |
| 10 | 18 | ಪೆಲ್ಟೋಫಾರಂ | 1.00 | 3.50 |
| 11 | 19 | ಪೆಲ್ಟೋಫಾರಂ | 1.20 | 3.50 |
| 12 | 20 | ಜಮ್ಮನೇರಳೆ | 2.10 | 3.50 |
| 13 | 21 | ಮಹಾಗನಿ | 1.26 | 3.50 |
| 14 | 22 | ಹುಣಸೆಮರ | 1.64 | 2.50 |
| 15 | 23 | ಪೆಲ್ಟೋಫಾರಂ | 2.35 | 2.50 |
| 16 | 24 | ಪೆಲ್ಟೋಫಾರಂ | 1.15 | 2.50 |

ವೃಕ್ಷಾಧಿಕಾರಿಗಳು ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.

## ಅನುಬಂಧ-2

ಪಶ್ಚಿಮ ವಲಯ ವ್ಯಾಪ್ತಿಯ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ಚೌಡಯ್ಯ ರಸ್ತೆ, ಸರ್ಕಲ್ ಮಾರಮ್ಮ ದೇವಸ್ಥಾನದಿಂದ ಕರ್ನಾಟಕ ಮೆಡಿಕಲ್ ಪ್ಲಾಂಟ್ ಪ್ರಾಧಿಕಾರದವರೆಗೆ (CET) ಪಾದಚಾರಿ ಮಾರ್ಗ ರಸ್ತೆ ನಿರ್ಮಾಣ ಯೋಜನೆ ಕಾಮಗಾರಿಗೆ ಅಡ್ಡಬರುವ 24 ಮರಗಳ ಪೈಕಿ ತೆರವುಗೊಳಿಸಬೇಕಾದ 8 ಮರಗಳ ವಿವರ.

| ಕ್ರಮ.ಸಂ | ತೆರವುಗೊಳಿಸುವ ಮರಗಳ ವಿವರ | | | |
|---|---|---|---|---|
| | ಮರಗಳ ಸಂಖ್ಯೆ | ಮರದ ಹೆಸರು | ಸುತ್ತಳತೆ (ಮೀ) | ಎತ್ತರ (ಮೀ) |
| 1 | 2 | ಗುಲ್‌ಮೊಹರ್ | 2.05 | 3.50 |
| 2 | 3 | ಗುಲ್‌ಮೊಹರ್ | 2.10 | 2.50 |
| 3 | 4 | ಗುಲ್‌ಮೊಹರ್ | 2.08 | 2.50 |
| 4 | 5 | ಮಹಾಗನಿ | 1.40 | 3.50 |
| 5 | 6 | ಗುಲ್‌ಮೊಹರ್ | 1.55 | 2.50 |
| 6 | 7 | ಮಹಾಗನಿ | 0.65 | 2.50 |
| 7 | 8 | ಮಹಾಗನಿ | 1.16 | 3.50 |
| 8 | 9 | ಮಹಾಗನಿ | 2.00 | 2.50 |

ವೃಕ್ಷಾಧಿಕಾರಿಗಳು ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.